ಅದ್ವೈತಮತದಲ್ಲಿ ಅಧ್ಯಾಸ

ಸಂಸ್ಕೃತ ಮೂಲ

ವಿದ್ವಾನ್ ಆರ್. ರಾಮಶಾಸ್ತ್ರೀ

ಅನುವಾದ

...ಂ ಎಚ್. ಎಲ್. ಸೀತಾದೇವಿ

ವಿದ್ಯಾಶಂಕರ ಪ್ರಕಾಶನ

ಮೈಸೂರು-೪

ಅದ್ವೈತಮತದಲ್ಲಿ ಅಧ್ಯಾಸ

ಸಂಸ್ಕೃತ ಮೂಲ

ವಿದ್ವಾನ್ ಆರ್. ರಾಮಶಾಸ್ತ್ರೀ

ಅನುವಾದ

ಕುಮಾರಿ ಎಚ್. ಎಲ್. ಸೀತಾದೇವಿ

ವಿದ್ಯಾಶಂಕರ ಪ್ರಕಾಶನ
ಮೈಸೂರು-೪

ADWAITAMATHADALLI ADHYASA Essay in Sanskrit by Vidwan R. Ramasastry, Kannada by Kumari H. L. Seethadevi

1982 March, 26

Price: 00-50

Publisher:
Vidyasankara Prakashana,
30, Devirammanni Agrahara,
Mysore-570004

Printers:
Sri Sharada Mudrana Prakashanalaya (P) Ltd.
Shankara Mutt, Mysore-570004

ಅದ್ವೈತ ಮತದಲ್ಲಿ ಅಧ್ಯಾಸ

ಅದ್ವೈತ ಸಿದ್ಧಾಂತ

ಯದವಿದ್ಯಾವಿಲಾಸೇನ ಲೋಕಾಧ್ಯಾಸ ಪರಂಪರಾ।
ಸರ್ವಾಧಿಷ್ಠಾನರೂಪಂ ತದ್ಬ್ರಹ್ಮತತ್ತ್ವಂ
ಪ್ರಸೀದತು ॥

†1. "ಯತ್ತದದ್ರೇಶ್ಯಮಗ್ರಾಹ್ಯಮಗೋತ್ರಮವರ್ಣಮ-ಚಕ್ಷುಃ ಶ್ರೋತ್ರಂ ತದಪಾಣಿಪಾದಂ"
2. "ಅಸಂಗೋ ನಹಿ ಸಜ್ಜತೆ"
3. "ನಿಷ್ಕಲಂ ನಿಷ್ಕ್ರಿಯಂ ಶಾಂತಂ ನಿರವದ್ಯಂ ನಿರಂಜನಂ"
4. "ಸತ್ಯಂ ಜ್ಞಾನಮನಂತಂ ಬ್ರಹ್ಮ"
5. "ಮಾಯಾಂತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಂ"
6. "ನೇಹ ನಾನಾಸ್ತಿ ಕಿಂಚನ"
7. "ತತ್ತ್ವಮಸಿ"
8. "ಅಹಂ ಬ್ರಹ್ಮಾಸ್ಮಿ"

9. "ಅಯಮಾತ್ಮಾ ಬ್ರಹ್ಮ"
10. "ತರತಿ ಶೋಕಮಾತ್ಮವಿತ್"
11. "ಭಿದ್ಯತೆ ಹೃದಯಗ್ರಂಥಿಃ ಛಿದ್ಯಂತೆ ಸರ್ವಸಂಶಯಾಃ
ಕ್ಷೀಯಂತೆ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೆ"
12. "ಪ್ರಜ್ಞಾನಂ ಬ್ರಹ್ಮ"

ಇತ್ಯಾದಿ ವೇದವಾಕ್ಯಗಳನ್ನು ಅನುಸರಿಸಿ "ಬ್ರಹ್ಮವೊಂದೇ ಸತ್ಯ, ಜಗತ್ತು ಮಿಥ್ಯ, ಜೀವನು ಬ್ರಹ್ಮನಲ್ಲದೆ ಬೇರೆಯಲ್ಲ" (ಬ್ರಹ್ಮಸತ್ಯಂ, ಜಗನ್ಮಿಥ್ಯಾ, ಜೀವೋ ಬ್ರಹ್ಮೈವ ನಾಪರಃ) ಎಂಬುದಾಗಿ ಅದ್ವೈತ-ಸಿದ್ಧಾಂತವು ಪ್ರವೃತ್ತವಾಗಿದೆ.

ಈ ಸಿದ್ಧಾಂತದ ಪ್ರಕಾರ ಸತ್, ಚಿತ್, ಆನಂದಾತ್ಮಕ-ವಾದ ಶುದ್ಧ ಬ್ರಹ್ಮವೇ ಮಾಯೆಯ ಉಪಾಧಿಯಿಂದ ಜಗದ್ರೂಪವಾಗಿ ತೋರುತ್ತದೆ.*

ಬ್ರಹ್ಮವನ್ನು ಆಶ್ರಯಿಸಿಕೊಂಡಿರುವ, ಬ್ರಹ್ಮನ ವಿಷಯಕವಾದ ಮಾಯೆಯೇ ಜಗದ್ರೂಪವಾಗಿ ಪರಿಣಾಮ ಹೊಂದುತ್ತದೆ. ಮಾಯೆ ಎಂದರೆ ಅನಾದಿಯಾದ ಭಾವರೂಪವಾದ ಅಜ್ಞಾನವೇ ಆಗಿದೆ. ಬ್ರಹ್ಮನಿಂದ ಹಿಡಿದು ಸ್ತಂಬದವರೆಗಿನ ಎಲ್ಲ ಚೇತನಗಳೂ, ಬ್ರಹ್ಮನನ್ನು ಆಶ್ರಯಿಸಿಕೊಂಡಿರುವ ಮಾಯೆಯ ಕಾರ್ಯಗಳಾದ ಉಪಾಧಿ ವಿಶೇಷಗಳಿಂದ ಕೂಡಿದವುಗಳಾಗಿ, ತತ್ತ್ವಮಸ್ಯಾದಿ

ಉಪನಿಷದ್ವಾಕ್ಯಗಳಿಂದ ಉಪದಿಷ್ಟವಾದ ಬ್ರಹ್ಮಾತ್ಮರ ಐಕ್ಯರೂಪವಾದ ಸ್ವಸ್ವರೂಪಜ್ಞಾನವನ್ನು ಪಡೆಯದೆ, ಅವಿದ್ಯೆಯಿಂದುಂಟಾದ ಕರ್ಮವಾಸನೆಯೆಂಬ ಪಾಶಬದ್ಧರಾಗಿ, ಬಹುವಾಗಿ ಸುತ್ತುತ್ತವೆ.

ಜೀವವ್ಯವಹಾರ ಅಧ್ಯಾಸದ ಮೂಲಕ

‡ 84 ಲಕ್ಷ ಜೀವರಾಶಿಗಳಲ್ಲಿ ಮನುಷ್ಯರೇ ಉತ್ತಮರು.

---

† 1) ಮುಂಡಕ ಉ 1-1-6 2) ಬೃಹದಾ ಉ 3-9-26
3) ಶ್ವೇತಾ 6-19 4) ತೈತ್ತಿರೀಯ ಉ 2-1-1
5) ಶ್ವೇತಾ ಉ 4-10 6) ಬೃಹದಾ ಉ 1-4-19
7) ಛಾಂದೋಗ್ಯ ಉ 6-8-16 8) ಬೃಹದಾ ಉ 1-4-10
9) ಮಾಂಡೂಕ್ಯ ಉ 10) ಛಾಂದೋಗ್ಯ ಉ 7-1-3
11) ಮುಂಡಕ ಉ 2-2-8 12) ಋಗ್ವೇದ.

* ಅಜ್ಞಾನಸ್ಯ ಶುದ್ಧ ಚಿದಾಶ್ರಯತ್ವಂ ತದ್ವಿಷಯತ್ವಂಚ।
"ಆಶ್ರಯತ್ವ ವಿಷಯತ್ವಭಾಗಿನೀ ನಿರ್ವಿಭಾಗಚಿತಿರೇವ ಕೇವಲಾ"
ಇತಿ ಸಂಕ್ಷೇಪಶಾರೀರಕಮ್ 1-319 ।

‡ ಜೀವರಾಶೇಃ ಚತುರಧಿಕಾಶೀತಿಲಕ್ಷಮಿತತ್ವಂ ತತ್ರ ಮನುಷ್ಯ ಜನ್ಮನಃ ಉತ್ತಮತ್ವಂ ಚ।
"ಚತುರಧಿಕಾಶೀತಿ ಲಕ್ಷಮಿತೇಷು ಜನ್ಮಸು ಮನುಷ್ಯಜನ್ಮೈವ ಮಾನ್ಯಂ।
ಯತ್ರ ಕಿಲ ವಿವೇಕಬುದ್ಧಿರನನ್ಯ ಸಾಧಾರಣೀ ಪ್ರಚಕಾಸ್ತಿ"
ಇತ್ಯನೇನ ಸ್ಪಷ್ಟಂ।

ಏಕೆಂದರೆ ಅವರು ವಿವೇಕಬುದ್ಧಿಯುಳ್ಳವರು. ಈ ಎಲ್ಲ ಜೀವರಾಶಿಗಳ ವ್ಯವಹಾರವೂ ಅಧ್ಯಾಸಮೂಲಕವಾಗಿಯೇ ನಡೆಯುತ್ತದೆ. ಔಪನಿಷದಿಕವಾದ ಬ್ರಹ್ಮಾತ್ಮೈಕ್ಯದ ಅನುಭವವೆಂಬ ಅಗ್ನಿಯಿಂದ ಸುಟ್ಟುಹೋದ ಅಜ್ಞಾನವೆಂಬ ಇಂಧನವುಳ್ಳವನಾದಾಗ್ಯೂ ಜೀವನ್ಮುಕ್ತನಿಗೆ ಎಲ್ಲಿಯುವರೆಗೆ ದೇಹವಿರುತ್ತದೆಯೋ ಅಲ್ಲಿಯುವರೆಗೆ, ದಗ್ಧವಾದ ವಸ್ತ್ರದಂತೆ, ಹುರಿದ ಬೀಜದಂತಿರುವ ಅವಿದ್ಯೆಯ ವಾಸನೆಯ ಮೂಲಕ ವ್ಯವಹಾರವು ನಡೆಯುತ್ತದೆ. ಆದರೆ ಅವನಿಗೆ ಇತರ ಜೀವಿಗಳಂತೆ ಜಗದಭಿಮಾನವಾಗಲೀ, ತನ್ಮೂಲಕವಾದ ಬಂಧವಾಗಲೀ ಇರುವುದಿಲ್ಲ. ದಗ್ಧವಾದ ಪಟವು ಆಕಾರಮಾತ್ರದಿಂದ ಪಟ ಎಂದು ವ್ಯವಹರಿಸಲ್ಪಟ್ಟರೂ, ಧರಿಸಲು ಯೋಗ್ಯವಾಗುವುದಿಲ್ಲ. ಅಂತೆಯೇ ಹುರಿದ ಬೀಜವು ಆಕಾರಮಾತ್ರದಿಂದ ಬೀಜ ಎಂದು ವ್ಯವಹೃತವಾದರೂ ಮೊಳಕೆಯನ್ನು ಉತ್ಪತ್ತಿ ಮಾಡಲು ಸಮರ್ಥವಾಗುವುದಿಲ್ಲ. ಆದ್ದರಿಂದ ದೇಹಾವಸಾನವಾಗುವವರೆಗೂ ಅವಿದ್ಯೆಯ ವಾಸನೆಯು ಇರುವುದರಿಂದ, ತನ್ಮೂಲಕವಾದ ವ್ಯವಹಾರವುಳ್ಳ ಜೀವನ್ಮುಕ್ತನಿಗೆ ಇತರ ಜೀವಿಗಳಂತೆ ಅಭಿಮಾನ ಮೂಲಕವಾದ ಬಂಧವಾಗಲೀ, ಅಂತಹ ವ್ಯವಹಾರವಾಗಲೀ ಇರುವುದಿಲ್ಲ.

ಅಧ್ಯಾಸದ ಸ್ವರೂಪ

ಬೆಳಕು ಕತ್ತಲೆಗಳಂತೆ ಅತ್ಯಂತ ವಿರುದ್ಧ ಧರ್ಮಗಳಾದ ಆತ್ಮ-ಅನಾತ್ಮರ ಹಾಗೂ ಅವುಗಳ ಧರ್ಮವಾದ ಚೈತನ್ಯ-ಜಾಡ್ಯಗಳನ್ನು ಪರಸ್ಪರ ಒಂದುಗೂಡಿಸುವುದರಿಂದ "ನಾನು ಚೇತನನು, ನಾನು ಜಡ (ಚೇತನೋಽಹಂ ಜಡೋಽಹಂ)" ಎಂಬುದಾಗಿ ಅಧ್ಯಾಸವು ಉಂಟಾಗುತ್ತದೆ. 'ನಾನು' ಎಂಬ ಪ್ರತ್ಯಕ್ಷಪ್ರಮೆಯಿಂದ ಗುರುತಿಸಲ್ಪಡುವ 'ಅಹಂ' ಪದಾರ್ಥವು ಆತ್ಮ-ಅನಾತ್ಮರೂಪವಾದ ಚಿದಚಿದ್‌ಗ್ರಂಥಿಯಾಗಿದೆ. ಆತ್ಮವು ಚಿತ್ಸ್ವರೂಪವಾದುದು. ಅನಾತ್ಮವು ಆತ್ಮಕ್ಕೆ ವ್ಯತಿರಿಕ್ತವಾದ ಅಚಿತ್ಸ್ವರೂಪವಾದ ಅಂತಃಕರಣವಾಗಿದೆ. ಆತ್ಮವಾದರೋ ಸತ್, ಚಿತ್, ಆನಂದರೂಪವಾದದ್ದು, ನಿತ್ಯವಾದದ್ದು.

ಮಾಯೆಯ ಕಾರ್ಯವಾದ ಅಂತಃಕರಣವು (ಅನಾತ್ಮವು) ಅನಿತ್ಯವಾದದ್ದು. ಅತ್ಯಂತ ಭಿನ್ನವಾದ ಆತ್ಮ-ಅನಾತ್ಮರಲ್ಲಿ ಅವಿವೇಕದಿಂದ ಮಿಥ್ಯಾಜ್ಞಾನದಿಂದ ಚಿತ್ಸ್ವರೂಪವಾದ ಆತ್ಮನಲ್ಲಿ, ಅದಕ್ಕೆ ಅತ್ಯಂತ ವ್ಯತಿರಿಕ್ತವಾದ ಮಾಯಿಕವಾದ ಅಂತಃಕರಣವನ್ನು ತಾದಾತ್ಮ್ಯದಿಂದ ಅಧ್ಯಾಸ ಮಾಡಿಕೊಂಡಾಗ, ಆತ್ಮನ ಸಂಸರ್ಗದಿಂದ ಅಂತಃಕರಣದಲ್ಲಿ 'ಅಹಂ' ಎಂಬ ಚಿದಚಿದ್ ಗ್ರಂಥ್ಯಾತ್ಮಕ ರೂಪವಾದ ಜ್ಞಾನವು ಉಂಟಾಗುತ್ತದೆ. ಅನಂತರ

ಈ ಅಹಮಾಕಾರಕ ಜ್ಞಾನದ ತಾದಾತ್ಮ್ಯದಿಂದ ದೇಹದ ಅಧ್ಯಾಸ ದಲ್ಲಿ, ದೇಹಧರ್ಮಗಳಾದ ಸ್ಥೂಲತ್ವ, ಕೃಶತ್ವ ಗೌರತ್ವಗಳಿಂದ "ನಾನು ಸ್ಥೂಲ, ನಾನು ಕೃಶ, ನಾನು ಗೌರ" ಎಂಬುದಾಗಿ ಆತ್ಮ ತಾದಾತ್ಮ್ಯವಾದ ವ್ಯವಹಾರವು ಉಂಟಾಗುತ್ತದೆ. ದೇಹ ವಿಶಿಷ್ಟವಾದ ಆತ್ಮನಲ್ಲಿ ಕ್ರಿಯೆಯ ಅಧ್ಯಾಸದಿಂದ 'ನಿಲ್ಲುತ್ತೇನೆ ಹೋಗುತ್ತೇನೆ' ಇತ್ಯಾದಿ ವ್ಯವಹಾರಗಳು ಉಂಟಾಗುತ್ತವೆ. ಮನೋವಿಶಿಷ್ಟವಾದ ಆತ್ಮನಲ್ಲಿ ಇಂದ್ರಿಯ ಮತ್ತು ಅದರ ಧರ್ಮ ಗಳ ಅಧ್ಯಾಸದಿಂದ 'ನಾನು ಮೂಕ, ನಾನು ಕುರುಡ, ನಾನು ಕಿವುಡ' ಎಂಬ ವ್ಯವಹಾರ ಉಂಟಾಗುತ್ತದೆ. ಹೀಗೆ ಅಂತಃ-ಕರಣವನ್ನು ಸಾಕ್ಷಿಯಲ್ಲಿ (ಆತ್ಮ) ಅಧ್ಯಾಸಮಾಡಿಕೊಳ್ಳುವುದ ರಿಂದ, ಆ ಮೂಲಕ ಅಂತಃಕರಣದ ಧರ್ಮಗಳಾದ ಇಚ್ಛೆ, ಸಂಕಲ್ಪ, ಸಂಶಯ, ನಿಶ್ಚಯ ಇತ್ಯಾದಿಗಳಿಂದ 'ಇಚ್ಛಿಸುತ್ತೇನೆ, ಸಂಕಲ್ಪಿಸುತ್ತೇನೆ' ಮುಂತಾದ ವ್ಯವಹಾರಗಳು ಉದಯಿಸುತ್ತವೆ. ಹೀಗೆಯೇ ಅಂತಃಕರಣವನ್ನು ಸಾಕ್ಷಿಯಲ್ಲಿ ಅಧ್ಯಾಸ ಮಾಡಿ ಕೊಳ್ಳುವುದರಿಂದ ಅಂತಃಕರಣದ ಧರ್ಮಗಳಾದ ಸುಖದುಃಖಗಳೂ ಸಾಕ್ಷಿಯಲ್ಲಿ ಅಧ್ಯಸ್ತವಾಗಿ 'ನಾನು ಸುಖಿ, ನಾನು ದುಃಖಿ' ಎಂಬ ವ್ಯವಹಾರವು ಪ್ರವೃತ್ತವಾಗುತ್ತದೆ. ಅಂತಃಕರಣವನ್ನು ಅದ ಕ್ಕಿಂತಲೂ ಭಿನ್ನವಾದ ಸಾಕ್ಷಿಯಲ್ಲಿ, ಸಾಕ್ಷಿಯನ್ನು ಅಂತಃಕರಣ ದಲ್ಲಿ ತಾದಾತ್ಮ್ಯದಿಂದ ಅಧ್ಯಾಸ ಮಾಡಿಕೊಳ್ಳುವುದರಿಂದ 'ನಾನು'

ಎಂಬ ವ್ಯವಹಾರ ಉಂಟಾಗುತ್ತದೆ. ದೇಹ ವಿಶಿಷ್ಟವಾದ ಆತ್ಮ ನಲ್ಲಿ ಸಂಬಂಧದ ಅಧ್ಯಾಸದಿಂದ ಬಾಹ್ಯಪದಾರ್ಥಗಳಾದ ಪತ್ನಿ, ಪುತ್ರಾದಿಗಳಲ್ಲಿ 'ನನ್ನ ಪತ್ನಿ, ನನ್ನ ಪುತ್ರ, ಇತ್ಯಾದಿ ವ್ಯವಹಾರ ಹುಟ್ಟುತ್ತದೆ. ಪುತ್ರಾದಿಗಳಲ್ಲಿರುವ ಸಾಕಲ್ಯ (ಸಮಗ್ರತೆ) ವೈಕಲ್ಯಾದಿಗಳೂ (ಅಸಮಗ್ರತೆ) ಕೂಡ ಆತ್ಮನಲ್ಲಿ ಅಧ್ಯಸ್ತವಾಗಿ ತೋರುವುದರಿಂದ 'ನನ್ನ ಪತ್ನಿ ಸಕಲೆ, ನನ್ನ ಪುತ್ರ ವಿಕಲ' ಮುಂತಾದ ವ್ಯವಹಾರಗಳು ಜನಿಸುತ್ತವೆ. ಹೀಗೆಯೇ ದೇಹದ ಮೂಲಕ ಜಾತಿಯ ಅಧ್ಯಾಸವಾದಾಗ 'ನಾನು ಮನುಷ್ಯ, ನಾನು ಬ್ರಾಹ್ಮಣ' ಇತ್ಯಾದಿ ವ್ಯವಹಾರಗಳು ಉಂಟಾಗುತ್ತವೆ.

ಆತ್ಮನಲ್ಲಿ ಅಂತಃಕರಣವು ತಾದಾತ್ಮ್ಯದಿಂದ ಅಧ್ಯಾಸ ವಾಗುವುದರಿಂದ ಆತ್ಮನಿಗೆ ಅಂತಃಕರಣನಿಷ್ಠವಾದ ಕರ್ತೃತ್ವಾದಿ ಗಳು ಸಿದ್ಧಿಸುತ್ತವೆ. ಅಂತಃಕರಣದಲ್ಲಿ ಆತ್ಮನ ಸಂಸರ್ಗದ ಅಧ್ಯಾಸ ದಿಂದ ಅಂತಃಕರಣಕ್ಕೆ ಆತ್ಮದ ಚೇತನತೆಯು ಸಿದ್ಧಿಸುತ್ತದೆ. ಶುದ್ಧ ಚೈತನ್ಯದಲ್ಲಿ (ಬ್ರಹ್ಮನಲ್ಲಿ) ಅಜ್ಞಾನದ (ಮಾಯೆಯ) ಅಧ್ಯಾಸವು ಅನಾದಿಯಾದದ್ದು (ಇದನ್ನು ಕಾರಣಾಧ್ಯಾಸ ಎನ್ನು ತ್ತಾರೆ. ಏಕೆಂದರೆ ಈ ಮಾಯೆಯ ಕಾರಣದಿಂದ ಶುದ್ಧ ಚೈತನ್ಯ ದಲ್ಲಿ ಜಗತ್ಸೃಷ್ಟ್ಯಾದಿಕಾರ್ಯಗಳು ನಡೆಯುತ್ತವೆ.) ಅಂತಃ ಕರಣದಿಂದುಂಟಾಗುವ 'ಅಹಂ' ಅಧ್ಯಾಸವು ಕಾರ್ಯರೂಪವಾ- ದರೂ ಕೂಡ, ಅದಕ್ಕೆ ಪೂರ್ವ, ಪೂರ್ವ ಅಧ್ಯಾಸವು ಕಾರಣ

ವಾಗುವುದರಿಂದ, ಈ ಅಧ್ಯಾಸವು ನದಿಯ ಪ್ರವಾಹದಂತೆ ಅವಿಚ್ಛಿನ್ನವಾಗಿ ಉಂಟಾಗುವುದರಿಂದ, ಪ್ರವಾಹದಂತೆಯೇ ಈ ಅಹಂ ಅಧ್ಯಾಸವೂ ಅನಾದಿಯಾದುದು. ಕರ್ಮಫಲ ನಶ್ವರವೇ ಆದರೂ (ಯತ್ ಕೃತಕಂ ತದನಿತ್ಯಂ ಎಂಬಂತೆ) ಚಾತುರ್ಮಾಸ್ಯ ಯಾಗಕ್ಕೆ ಅಕ್ಷಯ ಫಲ ಎನ್ನುವಂತೆ, ಈ ಅಹಂ ಅಧ್ಯಾಸಕ್ಕೆ ಆತ್ಮನ ಯಥಾರ್ಥ ಜ್ಞಾನ ಬರುವವರೆಗೂ ನಾಶವಿಲ್ಲದಿರುವುದರಿಂದ ಅದು ಅನಂತವೂ ಆಗಿದೆ. ಹೀಗೆ ಕರ್ತೃತ್ವ, ಭೋಕ್ತೃತ್ವ ಇತ್ಯಾದಿಯಾಗಿ ಉಪಲಕ್ಷಿತವಾದ, ಅನಾದಿ ಅನಂತವಾದ ಈ ಅಧ್ಯಾಸವು ಎಲ್ಲ ಲೌಕಿಕ ವೈದಿಕ ವ್ಯವಹಾರಗಳ ಪ್ರವರ್ತಕವಾಗಿರುವುದು ಸರ್ವಗೋಚರ ವಿಷಯವೇ ಆಗಿದೆ.

ಅಧ್ಯಾಸ ಲಕ್ಷಣ– ಅದರ ಅಂಶದಲ್ಲಿ ವಾದಿಗಳ ಅಭಿಪ್ರಾಯ

"ಸ್ಮೃತಿರೂಪಃ ಪರತ್ರ ಪೂರ್ವದೃಷ್ಟಾವಭಾಸಃ" * ಎಂಬುದು ಅಧ್ಯಾಸ ಲಕ್ಷಣವಾಗಿದೆ. ಅಂದರೆ ಸ್ಮೃತಿರೂಪವಾದ, ಹಿಂದೆ ಕಂಡಿದ್ದ ಒಂದು ವಸ್ತುವು ಬೇರೆ ವಸ್ತುವಿನಲ್ಲಿ ತೋರುವಿಕೆ ಎಂದರ್ಥ. ಈ ಲಕ್ಷಣದಲ್ಲಿ ಸ್ಮೃತಿರೂಪ ಎಂಬ ಪದದಿಂದ ಸ್ಮರಿಸಲ್ಪಡುವ ಪದಾರ್ಥಕ್ಕೆ ಸದೃಶವಾದ ಅರ್ಥವನ್ನೂ (ವಸ್ತುವನ್ನೂ) ಜ್ಞಾನವನ್ನೂ ಹೇಳಲಾಗಿದೆ. ಅಂದರೆ ಬೇರೆ ವಸ್ತುವಿನಲ್ಲಿ ಸ್ಮೃತಿ

* ಬ್ರ. ಸೂ. ಶಾಂ. ಭಾ. 1–1–1

ಸಾಧಾರಣವಾದ ಮತ್ತೊಂದು ಪದಾರ್ಥವು ಹಿಂದೆ ನೋಡಿದ್ದುದರಿಂದ ತೋರುತ್ತದೆ ಎಂದರ್ಥ. ‘ಪರತ್ರ ಪೂರ್ವದರ್ಶನಾದವಭಾಸತೆ’ ಎಂಬುದರಿಂದ ಅರ್ಥಾಧ್ಯಾಸ, ಜ್ಞಾನಾಧ್ಯಾಸಗಳೆರಡೂ ಸಂಗತವಾಗುತ್ತವೆ. ಅಧ್ಯಾಸದ ವಿಷಯದಲ್ಲಿ ಮತಭೇದಗಳಿದ್ದರೂ ಕೂಡ ‘ಪರತ್ರ ಪರಾವಭಾಸ’ ಎಂಬ ವಿಷಯದಲ್ಲಿ ಮಾತ್ರ ವಾದಿಗಳಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ಅಧಿಷ್ಠಾನ ಆರೋಪ್ಯಗಳ ವಿಷಯದಲ್ಲಿ ಮಾತ್ರ ಅವರು ಭಿನ್ನಾಭಿಪ್ರಾಯವುಳ್ಳವರಾಗಿದ್ದಾರೆ.

ಅಧ್ಯಾಸ ವಿಷಯದಲ್ಲಿ ವಾದಿಗಳ ಅಭಿಪ್ರಾಯ

ಅನ್ಯಥಾ ಖ್ಯಾತಿವಾದಿಗಳು “ಬೇರೆಡೆಯಲ್ಲಿರುವ ಕಪ್ಪೆಚಿಪ್ಪಿನಲ್ಲಿ ದೇಶಾಂತರದಲ್ಲಿರುವ ರಜತದ ಅಧ್ಯಾಸವಾಗುತ್ತದೆ.” ಎಂದು ಹೇಳುತ್ತಾರೆ. ಆತ್ಮಖ್ಯಾತಿವಾದಿಗಳಾದರೋ “ಬಾಹ್ಯವಾದ ಶುಕ್ತ್ಯಾದಿಗಳಲ್ಲಿ, ಆತ್ಮನ ಧರ್ಮವಾದ ಬುದ್ಧಿರೂಪವಾದ ಆಂತರಿಕವಾದ ರಜತದ ಅಧ್ಯಾಸವಾಗುತ್ತದೆ; ಅಂದರೆ ಆಂತರಿಕವಾದ ಬೆಳ್ಳಿಯು ಬಾಹ್ಯವಾದುದರಂತೆ ತೋರುತ್ತದೆ” ಎಂದು ತಿಳಿಯುತ್ತಾರೆ. ಅಖ್ಯಾತಿವಾದಿಗಳು “ಅಧಿಷ್ಠಾನ (ಆತ್ಮ) ಆರೋಪ್ಯಗಳಲ್ಲಿ (ಅಂತಃಕರಣ) ಭೇದವನ್ನು ತಿಳಿಯದಿರುವುದರಿಂದ ‘ಇದಂ ರಜತಂ’ ಎಂಬ ವಿಶಿಷ್ಟ ವ್ಯವಹಾರ ಉಂಟಾಗುತ್ತದೆ”

ಎನ್ನುತ್ತಾರೆ. (ಇವರು ಜ್ಞಾನವನ್ನು ಒಪ್ಪುವುದಿಲ್ಲ ಅದನ್ನೇ ವಿಶಿಷ್ಟ ವ್ಯವಹಾರ ಎ ನ್ನುತ್ತಾರೆ) ಜ್ಞಾನವಿಲ್ಲದೆ ವಿಶಿಷ್ಟವ್ಯವಹಾರವು ಸಾಧ್ಯ ವಿಲ್ಲದಿರುವದರಿಂದ, ಅದಕ್ಕೆ ಕಾರಣವಾಗಿ ವಿಶಿಷ್ಟಭ್ರಾಂತಿಯನ್ನೂ (ಅಧ್ಯಾಸವನ್ನೂ) ಒಪ್ಪಲೇಬೇಕಾಗುತ್ತದೆ. 'ಪರತ್ರಪರಾವ ಭಾಸ' ಎಂಬುದನ್ನು ಇವರೂ ಅಂಗೀಕರಿಸಿದ್ದಾರೆ. ಅಸತ್‌ಖ್ಯಾತಿ ವಾದಿಗಳಾದರೋ "ರಜತಾಧ್ಯಾಸಸ್ಥಲದಲ್ಲಿ ಶುಕ್ತಿರಜತಗಳಿಗೆ ವಿರುದ್ಧನಾದ ಅಸದ್ರೂಪವೇ ತೋರುತ್ತದೆ" ಎಂದು ಹೇಳುತ್ತಾರೆ ಹೀಗೆ ಅಧ್ಯಾಸ ವಿಷಯದಲ್ಲಿ ಅನ್ಯಥಾಖ್ಯಾತಿ ಮುಂತಾದ ಪ್ರಕಾರಭೇದಗಳಿದ್ದರೂ ಕೂಡ 'ಪರತ್ರ ಪೂರ್ವದೃಷ್ಟಾವಭಾಸ" ಎಂಬುದು ಸರ್ವ ಸಮ್ಮತವಾದ ಲಕ್ಷಣವಾಗಿದೆ.

ಅಧ್ಯಾಸ ವಿಭಾಗ, ನಿರುಪಾಧಿಕ ಅಧ್ಯಾಸಕ್ಕೆ ನಿದರ್ಶನ

ಅಧ್ಯಾಸವು ನಿರುಪಾಧಿಕ ಅಧ್ಯಾಸ, ಸೋಪಾಧಿಕ ಅಧ್ಯಾಸ ಎಂದು ಎರಡು ವಿಧವಾಗಿದೆ. ಕಪ್ಪೆ ಚಿಪ್ಪಿನಲ್ಲಿ ಬೆಳ್ಳಿ ತೋರುವುದು ನಿರುಪಾಧಿಕ ಅಧ್ಯಾಸಕ್ಕೆ ಉದಾಹರಣೆ. ಈ ನಿರುಪಾಧಿಕ ಅಧ್ಯಾಸದಲ್ಲಿ ಅವಿದ್ಯೆಯು ಕಾರಣಮಾತ್ರವಾಗಿರುತ್ತದೆ. ಅದು ಉಪಾಧಿಯಾಗಿರುವುದಿಲ್ಲ. ಉಪಾಧಿ ಎಂದರೆ ಭೇದಕ್ಕೆ ಕಾರಣವಾದುದು ಎಂದರ್ಥ. "ಯಾವತ್ ಕಾರ್ಯ-

ವಸ್ವಾಯೀ ಭೇದ ಹೇತುರುಪಾಧಿಃ" ‡ ಎಂಬುದಾಗಿ ಉಪಾಧಿಯನ್ನು ವ್ಯಾಖ್ಯಾನಿಸಲಾಗಿದೆ. "ಯಾವುದು ಭೇದಕ್ಕೆ ಹೇತುವಾಗುವದೋ ಅದು ಉಪಾಧಿ" ಎಂಬ ನಿಯಮವೂ ಅನುಭವಸಿದ್ಧವೇ ಆಗಿದೆ. ರಜತಾಧ್ಯಾಸದಲ್ಲಿ ಅವಿದ್ಯೆಯು ಭೇದಕ್ಕೆ ಹೇತುವಾಗುವುದಿಲ್ಲ. ಅದು ಕಾರಣ ಮಾತ್ರವಾಗಿರುತ್ತದೆ. ಹೀಗೆಯೇ ಆತ್ಮನಲ್ಲಿ ಅಹಂಕಾರಾಧ್ಯಾಸದಲ್ಲಿಯೂ ಕೂಡ ಅವಿದ್ಯೆಯು ಕಾರಣಮಾತ್ರವಾಗಿರುತ್ತದೆ. ಅದು ಭೇದ ಹೇತುವಾಗಿರುವುದಿಲ್ಲ. ಆದ್ದರಿಂದ ಆತ್ಮನಲ್ಲಿ ಅಹಂಕಾರಾಧ್ಯಾಸವೂ ಕೂಡ ನಿರುಪಾಧಿಕ ಅಧ್ಯಾಸವೇ ಆಗುತ್ತದೆ. ಬ್ರಹ್ಮ-ಜೀವ ಭೇದಾಧ್ಯಾಸದಲ್ಲಿಯಾದರೋ ಅವಿದ್ಯೆಯು ಉಪಾಧಿಯಾಗಿರುತ್ತದೆ. ಏಕೆಂದರೆ ಅಲ್ಲಿ ಜೀವ-ಬ್ರಹ್ಮಭೇದ, ಜೀವೇಶ್ವರ ಭೇದಗಳು ಅನುಭವಿಸಲ್ಪಡುತ್ತವೆ. ಹಗ್ಗದಲ್ಲಿ ಉಂಟಾಗುವ ಹಾವಿನ ಅಧ್ಯಾಸವೂ ಕೂಡ ನಿರುಪಾಧಿಕ ಅಧ್ಯಾಸವೇ ಆಗುತ್ತದೆ.

ಸೋಪಾಧಿಕ ಅಧ್ಯಾಸಕ್ಕೆ ನಿದರ್ಶನ

ಸೋಪಾಧಿಕ ಅಧ್ಯಾಸಕ್ಕೆ ದ್ವಿಚಂದ್ರದರ್ಶನವು ಉದಾಹರಣೆ. ಬೆರಳಿನಿಂದ ಕಣ್ಣನ್ನುಮುಚ್ಚಿ ನೋಡಿದಾಗ ಒಂದೇಚಂದ್ರನಲ್ಲಿ ದ್ವಿಚಂದ್ರದರ್ಶನವಾಗುತ್ತದೆ. ಇಲ್ಲಿ ಬೆರಳಿಗೆ ಭೇದ ಹೇತುತ್ವವಿರುವುದರಿಂದಲೇ ದ್ವಿತ್ವವು ತೋರುವುದರಿಂದ, ಅಂಗುಲಿಯು

‡ ಪೂರ್ಣಾನಂದ್ಯಾಮಧ್ಯಾಸಪ್ರಕರಣೇ ದ್ರಷ್ಟವ್ಯಂ

ಉಪಾಧಿಯಗಾಗುತ್ತದೆ. ಹೀಗೆ ಅಧ್ಯಾಸದ ವಿಭಾಗವನ್ನು ತಿಳಿಸುವ ಉದ್ದೇಶದಿಂದಲೇ ಆಚಾರ್ಯರು "ಕಪ್ಪೆಯು ಚಿಪ್ಪು ಬೆಳ್ಳಿಯಂತೆ ತೋರುತ್ತದೆ. ಒಬ್ಬನೇ ಚಂದ್ರ ಇಬ್ಬರಂತೆ ತೋರುತ್ತಾನೆ" * ಎಂದು ಎರಡು ಉದಾಹರಣೆಗಳನ್ನು ಹೇಳಿದ್ದಾರೆ. ಕನ್ನಡಿಯಲ್ಲಿ ಮುಖದ ಅಧ್ಯಾಸವು ಸೋಪಾಧಿಕ ಅಧ್ಯಾಸವಾಗುತ್ತದೆ. ಏಕೆಂದರೆ ಕನ್ನಡಿಯಲ್ಲಿ ಕಂಡುಬರುವ ಪ್ರತಿಮುಖದರ್ಶನವು ಮುಖಪ್ರತಿಬಿಂಬಗಳಿಗೆ ಭೇದಹೇತುವಾಗಿರುತ್ತದೆ.

ರಜತಾಧ್ಯಾಸದಲ್ಲಿ ಅನ್ಯಥಾಖ್ಯಾತಿತ್ವದ ನಿರಾಸ

ರಜತದ ಅಧ್ಯಾಸದಲ್ಲಿ 'ಬೇರೆ ಸ್ಥಳದಲ್ಲಿರುವ ಬೆಳ್ಳಿಯು ಕಪ್ಪೆಚಿಪ್ಪಿನಲ್ಲಿ ತೋರುತ್ತದೆ' ಎಂಬುದು ಸರಿಯಲ್ಲ. ಏಕೆಂದರೆ ದೇಶಾಂತರಸ್ಥವಾದ ಬೆಳ್ಳಿಯು ಕಣ್ಣಿಗೆ ಗೋಚರಿಸದಿರುವುದರಿಂದ. ಸಮೀಪದಲ್ಲಿಲ್ಲದ (ಅಸನ್ನಿಕೃಷ್ಟವಾದ) ವಸ್ತುವು ಪ್ರತ್ಯಕ್ಷಕ್ಕೆ ವಿಷಯವಾಗುವುದಿಲ್ಲ. ಶುಕ್ತಿಯಲ್ಲಿ ರಜತದ ಸನ್ನಿಕರ್ಷವಿಲ್ಲದಿರುವುದರಿಂದ ಕಪ್ಪೆಚಿಪ್ಪಿನಲ್ಲಿ ಬೆಳ್ಳಿಯು ತೋರುತ್ತದೆ ಎಂಬುದು ಯುಕ್ತವಾಗುವುದಿಲ್ಲ. ಲೌಕಿಕ ಸನ್ನಿಕರ್ಷಸ್ಥಲದಲ್ಲಿ ಮಾತ್ರ 'ಸಾಕ್ಷಾತ್ಕರೋಮಿ' ಎಂಬ ಅನುವ್ಯವಸಾಯವು ಉಂಟಾಗುತ್ತದೆ. ಅಲೌಕಿಕ ಸನ್ನಿಕರ್ಷಸ್ಥಲದಲ್ಲಿ ಈ ಅನುವ್ಯವಸಾಯವು ಅನುಭವಿಸಲ್ಪ

* ಬ್ರ. ಸೂ. ಶಾಂ. ಭಾ. 1—1—1

ಡುವುದಿಲ್ಲ. ಶುಕ್ತಿಯಲ್ಲಿ 'ಬೆಳ್ಳಿಯನ್ನು ಸಾಕ್ಷಾತ್ಕರಿಸುತ್ತೇನೆ' ಎಂಬ ಅನುವ್ಯವಸಾಯವು ಇರುತ್ತದೆ. ಆದರೆ ಇಲ್ಲಿ ಬೆಳ್ಳಿಯು ಸನ್ನಿಕರ್ಷವಿಲ್ಲದಿರುವುದರಿಂದ ಇದನ್ನು ಅಲೌಕಿಕ ಸನ್ನಿಕರ್ಷ ಎಂದು ಅಂಗೀಕರಿಸಿದರೆ ಇದು (ರಜತಂ ಸಾಕ್ಷಾತ್ಕರೋಮಿ ಎಂಬ ಅನುವ್ಯವಸಾಯ) ಯುಕ್ತವಾಗುವುದಿಲ್ಲ. ಆದ್ದರಿಂದ ರಜತಾಧ್ಯಾಸವು ಅನ್ಯಥಾಖ್ಯಾತಿ ರೂಪವಾದುದಲ್ಲ.

ರಜತಾಧ್ಯಾಸವು ಆತ್ಮಖ್ಯಾತಿರೂಪವೂ ಅಲ್ಲ

ಆಂತರಿಕವಾದ ಬುದ್ಧಿಯಲ್ಲಿರುವ ರಜತವು ಬಾಹ್ಯವಾದುದರಂತೆ ತೋರುತ್ತದೆ ಎಂಬುದು ಆತ್ಮಖ್ಯಾತಿವಾದ. ಬುದ್ಧಿಸ್ಥವಾದ ರಜತವು ಹೊರಗೆ ತೋರುವುದು ಅಸಂಭವ. 'ಇದು ಬೆಳ್ಳಿ' ಎಂಬ ಬಾಹ್ಯವಾದ ಕಪ್ಪೆಚಿಪ್ಪಿನಲ್ಲಿರುವ ಬೆಳ್ಳಿಯೇ ಪ್ರತ್ಯಕ್ಷವಾಗುತ್ತದೆ. ಆದ್ದರಿಂದ ರಜತಾಧ್ಯಾಸವು ಆತ್ಮಖ್ಯಾತಿ ರೂಪವೂ ಅಲ್ಲ.

ರಜತಾಧ್ಯಾಸವು ಅಖ್ಯಾತಿರೂಪವೂ ಅಲ್ಲ

ಅಧಿಷ್ಠಾನ ಆರೋಪ್ಯಗಳಲ್ಲಿ ಭೇದವನ್ನು ತಿಳಿಯದಿರುವುದರಿಂದ 'ಇದು ರಜತ' ಎಂಬ ವಿಶಿಷ್ಟ ವ್ಯವಹಾರ ಮಾತ್ರ ಉಂಟಾಗುತ್ತದೆ ಎಂಬ ಅಖ್ಯಾತಿವಾದವೂ ಯುಕ್ತವಾಗುವುದಿಲ್ಲ. ವಿಶಿಷ್ಟ ವ್ಯವಹಾರವೂಕೂಡ ಆ ರೀತಿಯ ಭ್ರಾಂತಿಯ ಮೂಲಕವೇ

ಉಂಟಾಗುವುದು. ಆದ್ದರಿಂದ 'ಇದು ಬೆಳ್ಳಿ' ಎಂಬ ವಿಶಿಷ್ಟ ವ್ಯವಹಾರವನ್ನು ಉಪಪಾದಿಸುವುದು ಭ್ರಮೆಯೇ ಆಗಿದೆ. ಆದುದರಿಂದ ರಜತಾಧ್ಯಾಸವು ಅಖ್ಯಾತಿ ರೂಪವೂ ಅಲ್ಲ.

ರಜತಾಧ್ಯಾಸವು ಅಸತ್‌ಖ್ಯಾತಿರೂಪವೂ ಅಲ್ಲ

ಅಸತ್ತಾದ ರಜತವು ಶುಕ್ತಿಯಲ್ಲಿ ತೋರುತ್ತದೆ ಎಂಬುದೂ ಯುಕ್ತವಾಗುವುದಿಲ್ಲ. ಏಕೆಂದರೆ ಅಸತ್ತಿಗೆ ಸನ್ನಿಕರ್ಷದ ಸಾಧ್ಯತೆ ಇಲ್ಲದಿರುವುದರಿಂದ, ಅದು ಪ್ರತ್ಯಕ್ಷವಾಗುವ ಸಾಧ್ಯತೆಯೂ ಇಲ್ಲ. ಅಸತ್ತಾದ ರಜತವು ಬಾಧಿತವಾಯಿತು ಎಂದು ಬಾಧಕಾಲದಲ್ಲಿ ಪ್ರತೀತಿ ಉಂಟಾಗದಿರುವುದರಿಂದ, ಅಸತ್ತಾದ ರಜತವನ್ನು ಅಂಗೀಕರಿಸುವುದು ಸರಿಯಲ್ಲ. ಏಕೆಂದರೆ ಇಲ್ಲದೆಯೇ ಇರುವ (ಅತ್ಯಂತಾಸತಃ) ವಸ್ತುವು ಸ್ವರೂಪತಃ ಅಸಿದ್ಧವಾಗುವುದರಿಂದ, ವ್ಯವಹರಿಸಲು ಯೋಗ್ಯವಾಗುವುದಿಲ್ಲವಾದ್ದರಿಂದ ಅದರ ಸನ್ನಿಕರ್ಷ ಸಾಧ್ಯವಾಗುವುದಿಲ್ಲ. ಆದ್ದರಿಂದ 'ಇದು ಬೆಳ್ಳಿ' ಎಂಬುದು ಅಸತ್ ಖ್ಯಾತಿರೂಪವೂ ಅಲ್ಲ.

ರಜತಾಧ್ಯಾಸವು ಅನಿರ್ವಚನೀಯಖ್ಯಾತಿ ರೂಪವಾದುದು

"ಅನಿರ್ವಚನೀಯವಾದ ಬೆಳ್ಳಿಯು ಕಪ್ಪೆಚಿಪ್ಪಿನಲ್ಲಿ ಉತ್ಪನ್ನವಾಗಿ ಇರುತ್ತದೆ. ಅದೇ 'ಇದು ರಜತ' ಎಂಬುದಾಗಿ ತೋರು

ತ್ತದೆ" ಎಂಬುದೇ ಅನಿರ್ವಚನೀಯ ಖ್ಯಾತಿವಾದ. ಶುಕ್ತಿಯಲ್ಲಿ ರಜತೋತ್ಪತ್ತಿಯ ಸಾಮಗ್ರಿ ಇಲ್ಲದಿರುವುದರಿಂದ, ಹೇಗೆ ರಜತದ ಭಾಸವಾಗುತ್ತದೆ ಎಂದು ಶಂಕಿಸುವುದು ಸರಿಯಲ್ಲ. ಶುದ್ಧ ಚೈತನ್ಯದಲ್ಲಿರುವ ಇದಂ ಅಂಶಾವಚ್ಛಿನ್ನವಾದ ಪೂರ್ವಪೂರ್ವ ವಾಸನಾ ಸಹಿತವಾದ ಅವಿದ್ಯೆಯು ರಜತಾಕಾರವಾಗಿ ಪರಿಣಮಿಸುತ್ತದೆ ಎಂದು ಅಂಗೀಕರಿಸಿರುವುದರಿಂದ, ಅವಿದ್ಯಾದಿ ಸಾಮಗ್ರಿಗಳಿಗೆ ರಜತೋತ್ಪಾದಕ ಸಾಮರ್ಥ್ಯವಿರುವುದರಿಂದ ಶುಕ್ತಿಯಲ್ಲಿ ರಜತಸತ್ತ್ವವು ಸಂಭವಿಸುತ್ತದೆ. 'ಇದಂ' ಎಂಬುದರ ಸನ್ನಿಕರ್ಷದಿಂದಲೇ ಅದರೊಡನೆ ತಾದಾತ್ಮ್ಯ ಹೊಂದಿರುವ ರಜತವೂ ಕೂಡ ಇದಮಾಕಾರಕ ವೃತ್ತಿಯಿಂದ ಕೂಡಿದ ಸಾಕ್ಷಿಯಲ್ಲಿ ಕಂಡುಬರುತ್ತದೆ. ಆದ್ದರಿಂದ ಇಲ್ಲಿ ರಜತದ ಸನ್ನಿಕರ್ಷದ ವಿಷಯದಲ್ಲಿ ಸಂಶಯಕ್ಕೆ ಅವಕಾಶವಿಲ್ಲ. ಆದುದರಿಂದ ಪ್ರತ್ಯಕ್ಷವು ಬೇರೆ ರೀತಿಯಿಂದ ಅನುಪಪನ್ನವಾಗುವುದರಿಂದ, ಅವಿದ್ಯಾದಿ ಸಾಮಗ್ರಿಗಳಿಂದ ಉತ್ಪನ್ನವಾದ, ಪ್ರತಿಭಾಸಕಾಲದಲ್ಲಿಮಾತ್ರ ಇರುವ, ಬೇರೆಯೇ ರಜತದ ಸನ್ನಿಕರ್ಷಉಂಟಾಗುತ್ತದೆ ಎಂದು ಅವಶ್ಯವಾಗಿ ಹೇಳಬೇಕು. ಆದರೆ ಅದು ಸತ್ಯವಾಗುವುದು ಸಾಧ್ಯವಿಲ್ಲ. ಶುಕ್ತಿರಜತದಲ್ಲಿ ಅರ್ಥಕ್ರಿಯಾರೂಪವಾದ ಸಾಮರ್ಥ್ಯ ಇರುವುದಿಲ್ಲ. ರಜತ ಪ್ರತಿಭಾಸಾನಂತರ 'ಇದು ರಜತವಲ್ಲ' 'ಇಲ್ಲಿ ರಜತವಿಲ್ಲ' ಇತ್ಯಾದಿ ನಿಷೇಧವು ಕಂಡುಬರುವುದರಿಂದ, ಶುಕ್ತಿ ರಜತಕ್ಕೆ ಅಬಾಧಿತತ್ವ-

ರೂಪವಾದ ಸತ್ತ್ವವೂ ಇಲ್ಲ. ಆದ್ದರಿಂದ ಪ್ರತ್ಯಕ್ಷತ್ವವನ್ನು ನಿರ್ವಾಹ ಮಾಡಲು ಯೋಗ್ಯವಾದ ಪ್ರತಿಭಾಸಕಾಲದಲ್ಲಿ ಮಾತ್ರ ವಿರುವ ಅನಿರ್ವಚನೀಯವಾದ, ಮಿಥ್ಯಾರೂಪವಾದುದೇ ಶುಕ್ತಿ ರಜತವೆಂದು ಇಷ್ಟವಿಲ್ಲದಿದ್ದರೂ ಅಂಗೀಕರಿಸಲೇಬೇಕು.

ಆತ್ಮನು ಅಧ್ಯಾಸಕ್ಕೆ ಅಧಿಷ್ಠಾನವಾಗುವ್ರದಿಲ್ಲ ಎಂಬ ಶಂಕೆ, ಅದರ ನಿರಾಸ

ಆತ್ಮನು ಶುಕ್ತ್ಯಾದಿಗಳಂತೆ ಎದುರಿಸಲ್ಲಿದ್ದುಕೊಂಡು ಗೋಚರಿಸದಿದ್ದರೂ, ಅವನು ಸ್ವಪ್ರಕಾಶರೂಪದಿಂದ ಭಾಸಮಾನನಾಗಿರುವುದರಿಂದ 'ಅಹಂ' ಪ್ರತ್ಯಯ ಗೋಚರನಾಗಿದ್ದಾನೆ. ಅಹಂಕಾರದ ಅಧ್ಯಾಸವು ಅನಾದಿಯಾದುದರಿಂದ ಪೂರ್ವಪೂರ್ವ ಅಧ್ಯಾಸಕ್ಕೆ ಗೋಚರನಾದ ಆತ್ಮನು ಉತ್ತರೋತ್ತರ ಅಹಂಕಾರದ ಅಧ್ಯಾಸಕ್ಕೆ ಅಧಿಷ್ಠಾನವಾಗುತ್ತಾನೆ. ಅಪರೋಕ್ಷವಾದ ಅಧ್ಯಾಸಕ್ಕೆ ಅಧಿಷ್ಠಾನವಾಗಲು ಎದುರಿನಲ್ಲಿ ಇರಲೇಬೇಕೆಂಬ ನಿಯಮವಿಲ್ಲ. ಇಂದ್ರಿಯಕ್ಕೆ ಅಸನ್ನಿಕೃಷ್ಟವಾದರೂ ಆಕಾಶದಲ್ಲಿ ತಲಮಲಿನತಾದಿಗಳ ಅಧ್ಯಾಸವು ಕಂಡುಬರುತ್ತದೆ. ಆಕಾಶತಲ, ಮಲಿನವಾದ ಆಕಾಶ ಇತ್ಯಾದಿ ಅನುಭವವೂ ಉಂಟಾಗುತ್ತದೆ. ಸಾದೃಶ್ಯವೂ ಕೂಡ ಅಧ್ಯಾಸದ ಸಾಮಾನ್ಯ ನಿಯಮವಲ್ಲ. ಸಾದೃಶ್ಯವಿಲ್ಲದಿದ್ದರೂ ಕೂಡ ಆಕಾಶದಲ್ಲಿ 'ನೀಲಿಯಾಕಾಶ' ಎಂಬ ಅಧ್ಯಾಸ

ಉಂಟಾಗುತ್ತದೆ. ನೀರಿನಿಂದ ತುಂಬಿರುವ ಸಮುದ್ರದಲ್ಲಿ ನೀಲ ಶಿಲಾತಲದ ಅಧ್ಯಾಸದ ಅನುಭವವಾಗುತ್ತದೆ. ಆದ್ದರಿಂದ ಆತ್ಮನಿಗೆ ಅಹಂಕಾರದ ಅಧ್ಯಾಸದ ಅಧಿಷ್ಠಾನತ್ವವು ಉಪಪನ್ನವಾಗುವುದರಿಂದ, ಆತ್ಮನಲ್ಲಿ ಅಹಂಕಾರದ ಅಧ್ಯಾಸವು ಯುಕ್ತವೇ ಆಗುತ್ತದೆ.

ಅಧ್ಯಾಸವು ಎಲ್ಲ ಲೌಕಿಕ ವೈದಿಕ ವ್ಯವಹಾರಗಳ ಪ್ರವರ್ತಕವಾದುದು

* ಈ ಅಧ್ಯಾಸವನ್ನು ಅವಿದ್ಯೆ ಎಂದೂ ಹೇಳುತ್ತಾರೆ. ಈ ಅವಿದ್ಯಾಮೂಲಕವಾಗಿ ಪ್ರಮಾತೃತ್ವ, ಕರ್ತೃತ್ವ, ಭೋಕ್ತೃತ್ವ ಇತ್ಯಾದಿ ಎಲ್ಲ ರೀತಿಯ ಅಧ್ಯಾಸವು ಆತ್ಮನಲ್ಲಿ ಉಂಟಾಗಿ, ಆತ್ಮನನ್ನು ಎಲ್ಲ ಲೌಕಿಕ, ವೈದಿಕ ವ್ಯವಹಾರಗಳಲ್ಲಿ ಪ್ರವರ್ತಿಸುವಂತೆ ಮಾಡುತ್ತದೆ.

* "ತಮೇತಮವಿದ್ಯಾಖ್ಯಮಾತ್ಮಾನಾತ್ಮನೋರಿತರೇತರಾಧ್ಯಾಸಂ"

ಇತಿ ಭಾಷ್ಯೆ ||

ಬ್ರ. ಸೂ. ಶಾಂ. ಭಾ. 1-1-1

ಅನುಮಾನದಿಂದಲೂ ಅಧ್ಯಾಸವು ಸಿದ್ಧಿಸುತ್ತದೆ

ಹೀಗೆ ಅಧ್ಯಾಸವು ಸ್ವಪ್ರಕಾಶನಾದ ಸಾಕ್ಷಿ ಪ್ರತ್ಯಕ್ಷದಿಂದ ಸಿದ್ಧವಾಗಿದ್ದರೂ ಕೂಡ, ಅದು ಅನುಮಾನದಿಂದಲೂ ತಿಳಿದು ಬರುತ್ತದೆ. ಎಲ್ಲ ಪ್ರಮಾಣಗಳೂ, ಶಾಸ್ತ್ರಗಳೂ ಅವಿದ್ಯೆಯಿಂದ ಕೂಡಿದ ವಿಷಯಗಳಲ್ಲಿಯೇ ಪ್ರವರ್ತಿಸುತ್ತವೆ. ಹೇಗೆಂದರೆ ದೇವ ದತ್ತಕರ್ತೃಕವಾದ ವ್ಯವಹಾರವು ಅವನ ದೇಹದ ವಿಷಯದಲ್ಲಿ 'ನಾನು' ಇಂದ್ರಿಯಗಳ ವಿಷಯದಲ್ಲಿ 'ನನ್ನದು' ಎಂಬ ಅಧ್ಯಾಸದ ಮೂಲಕವೇ, ಅದಕ್ಕೆ ಅನ್ವಯವಾಗಿ ಇಲ್ಲವೇ ವ್ಯತಿರೇಕವಾಗಿ ಉಂಟಾಗುತ್ತದೆ. ಮೃಣ್ಮೂಲಕವೇ ಘಟ ಎಂಬ ಅನುಮಾನ ದಿಂದ 'ಅಹಂ' 'ಮಮ' ಎಂಬ ಅಧ್ಯಾಸವೇ ದೇವದತ್ತನ ವ್ಯವ ಹಾರಕ್ಕೆ ಹೇತು ಎಂದು ಅನುಮಾನಿಸಲ್ಪಡುತ್ತದೆ. ಒಂದು ವೇಳೆ ದೇವದತ್ತನು 'ನಾನು ನನ್ನದು' ಎಂಬ ಅಭಿಮಾನರಹಿತನಾಗಿದ್ದರೆ ಅವನು ಪ್ರಮಾತೃವಾಗುವುದು ಸಾಧ್ಯವಿಲ್ಲ. ಅವನು ಪ್ರಮಾತೃ ವಾಗಿಲ್ಲದಿರುವಾಗ ಅವನಿಗೆ ಪ್ರಮಾಣದ ವಿಷಯದಲ್ಲಿ ಪ್ರವೃ-ತ್ತಿಯೂ ಉಂಟಾಗುವುದಿಲ್ಲ. ಇಂದ್ರಿಯಾದಿ ಪ್ರಮಾಣಗಳಲ್ಲಿ 'ನಾನು ನನ್ನದು' ಎಂಬ ಅಭಿಮಾನರಹಿತನು, ಪ್ರತ್ಯಕ್ಷಾದಿ ಪ್ರಮಾಣಗಳಲ್ಲಿ ಪ್ರವೃತ್ತನಾಗುವುದಿಲ್ಲ. ಇಂದ್ರಿಯಗಳು ಅಧಿ-ಷ್ಠಾನದ (ಶುದ್ಧ ಚೈತನ್ಯದ, ಆತ್ಮದ) ಸಂಬಂಧವಿಲ್ಲದೆ ವ್ಯವಹಾರ ದಲ್ಲಿ ತೊಡಗಲಾರವು. ದೇಹದಲ್ಲಿ ಅಧ್ಯಸ್ತವಾದ ಆತ್ಮಭಾವವಿಲ್ಲದ

ಯಾವನೂ, ಎಲ್ಲಿಯೂ ವ್ಯವಹರಿಸುವುದಿಲ್ಲ. ಆತ್ಮನಿಗೆ ಅಂತಃ-ಕರಣದ ಸಂಬಂಧ, ಅಂತಃಕರಣಕ್ಕೆ ಇಂದ್ರಿಯಗಳ ಸಂಬಂಧವಿಲ್ಲದ ಅಸಂಗನಾದ ಆತ್ಮನಿಗೆ ಪ್ರಮಾತೃತ್ವವು ಸಿದ್ಧಿಸುವುದಿಲ್ಲ. ಆತ್ಮನಿಗೆ ಪ್ರಮಾತೃತ್ವವು ಇಲ್ಲದಿರುವಾಗ ಯಾವನೂ ಪ್ರಮಾಣದಲ್ಲಿ ಪ್ರವರ್ತಿಸುವುದಿಲ್ಲ. ಸುಷುಪ್ತಿಯಲ್ಲಿ ಪ್ರಮಾತೃತ್ವವಿಲ್ಲದಿರುವುದರಿಂದ ಅಲ್ಲಿ ಪ್ರಮಾಣ ಪ್ರವೃತ್ತಿಯೂ ಕಂಡುಬರುವುದಿಲ್ಲ. ಅಧ್ಯಾಸವಿಲ್ಲದೆ ಪ್ರತ್ಯಕ್ಷಾದಿ ಪ್ರಮಾಣಗಳ ವ್ಯವಹಾರವು ಉಪಪನ್ನವಾಗುವುದಿಲ್ಲವಾದ್ದರಿಂದ, ತನ್ಮೂಲಕವಾದ ಯುಕ್ತಿಯಿಂದ, ದೇವದತ್ತನ ಅವಿದ್ಯೆಯಿಂದ ಕೂಡಿದ ಅಂತಃಕರಣ ದೇಹಾದಿಗಳಲ್ಲಿ 'ಅಹಂ' 'ಮಮ' ಎಂಬ ಅಧ್ಯಾಸವು ಸಿದ್ಧಿಸುತ್ತದೆ.

ಪ್ರಮಾಣಗಳು ಅಪ್ರಮಾಣ ಎಂಬ ಶಂಕೆಯ ನಿರಾಸ

ಪ್ರಮಾಣಗಳು ಅವಿದ್ಯೆಯಿಂದ ಕೂಡಿದವನ ವಿಷಯದಲ್ಲಿ ಪ್ರವೃತ್ತವಾಗುವುದರಿಂದ ಅವು ಹೇಗೆ ಪ್ರಾಮಾಣ್ಯವಾಗುತ್ತವೆ ? ಎಂದು ಶಂಕಿಸಬಾರದು. ಅಹಂ ಎಂಬ ಅಧ್ಯಾಸರೂಪವಾದ ಅವಿದ್ಯೆಯು ಪ್ರಮಾತೃವಿನ ಅಂತರ್ಗತವಾಗಿರುವುದರಿಂದ ಅಲ್ಲಿ ದೋಷವಿರುವುದಿಲ್ಲ. (ಸಹಜವಾಗಿ ಬಂದವು ದೋಷ ಎನಿಸುವುದಿಲ್ಲ. ಅದು ಆಗಾಮಿಕವಾಗಿದ್ದರೆ ದೋಷವೆನಿಸುತ್ತದೆ.) ಪ್ರಮಾತೃತ್ವವು ಸಿದ್ಧಿಸಿದ ನಂತರ, ಕಣ್ಣು ಇದ್ದ ನಂತರ ಕಾಮಾಲೆ ಇತ್ಯಾದಿ

ದೋಷಗಳು ಉಂಟಾಗುವಂತೆ, ದೋಷವೂ ಉಂಟಾಗುತ್ತದೆ. ಆದ್ದರಿಂದ ಅವಿದ್ಯೆಯಿಂದ ಕೂಡಿದ ವಿಷಯಗಳಲ್ಲಿ ಪ್ರವೃತ್ತ ವಾದರೂ ಪ್ರಮಾಣಗಳು ಅಪ್ರಮಾಣ ಎಂದು ಶಂಕಿಸುವುದಕ್ಕೆ ಅವಕಾಶವಿಲ್ಲ.

ಅಧ್ಯಾಸವು ಸರ್ವ ಪ್ರಾಣಿಸಾಧಾರಣವಾದುದು

ಅಧ್ಯಾಸವು ಮನುಷ್ಯಮಾತ್ರರಿಗೆ ಸೀಮಿತವಲ್ಲ. ಅದು ಪಶುಗಳಿಗೂ ಸಮಾನವಾಗಿದೆ. ನಮ್ಮ ವ್ಯವಹಾರ ಅಧ್ಯಾಸ ಮೂಲಕ ಎಂದು ಪಶ್ವಾದಿಗಳಿಗೆ ತಿಳಿಯದಿದ್ದರೂ ಕೂಡ, ಅನ್ವಯ ವ್ಯತಿರೇಕ ದೃಷ್ಟಾಂತಗಳಿಂದ ಪಶ್ವಾದಿಗಳ ವ್ಯವಹಾರವೂ ಅಧ್ಯಾಸಮೂಲಕವೇ ಎಂದು ತಿಳಿದು ಬರುತ್ತದೆ. ಪಶುಗಳು ಹಸಿರು ಹುಲ್ಲನ್ನು ಹಿಡಿದಿರುವ ಮನುಷ್ಯನನ್ನು ನೋಡಿ ಅವನ ಸಮೀಪಕ್ಕೆ ಹೋಗುತ್ತವೆ. ಕೋಲನ್ನು ಹಿಡಿದಿರುವ ಮನುಷ್ಯ ನನ್ನು ನೋಡಿ ಓಡಿ ಹೋಗುತ್ತವೆ. ವಿವೇಕಿಗಳಾದ ಪುರುಷರೂ ಕ್ರೂರದೃಷ್ಟಿಯುಳ್ಳ, ಕೋಪದಿಂದ ಖಡ್ಗವನ್ನು ಹಿಡಿದಿರುವ ವರನ್ನು ಕಂಡು ಪಲಾಯನ ಮಾಡುತ್ತಾರೆ. ಸುಮುಖರಾದ, ಆಕ್ರೋಶರಹಿತರಾದ ಪುರುಷರನ್ನು ಕಂಡು ಅವರೊಡನೆ ವ್ಯವ-ಹರಿಸುತ್ತಾರೆ. ಆದ್ದರಿಂದ ಪುರುಷರು ವಿವೇಚನಾಶೀಲರಾದರೂ ಕೂಡ ಪ್ರಮಾಣ ಪ್ರಮೇಯ ವ್ಯವಹಾರವು ಪಶ್ವಾದಿಗಳಿಗೂ ಸಮಾನವಾಗಿಯೇ ಇರುತ್ತದೆ.

ಶಾಸ್ತ್ರೀಯ ವ್ಯವಹಾರವು ಅಧ್ಯಾಸ ಮೂಲಕವಲ್ಲ ಎಂಬ ಶಂಕೆಯ ನಿರಾಸ

ಮಾನವರ ಶಾಸ್ತ್ರೀಯ ವ್ಯವಹಾರವೂ ಕೂಡ ಅಧ್ಯಾಸ ಮೂಲಕವೇ ನಡೆಯುವುದು. ಜ್ಯೋತಿಷ್ಟೋಮಾದಿ ವಾಕ್ಯಗಳಿಂದ, ದೇಹದಿಂದ ಭಿನ್ನನಾದ ಆತ್ಮನಿಗೆ ಫಲಭೋಕ್ತೃತ್ವವು ತಿಳಿದುಬರುವುದಿಲ್ಲವಾದ್ದರಿಂದ, ಜ್ಯೋತಿಷ್ಟೋಮಾದಿ ಯಾಗ ಪ್ರವೃತ್ತಿಯು ಅಧ್ಯಾಸ ಮೂಲಕವಾಗಿ ಉಂಟಾಗುವುದಿಲ್ಲ ಎಂದು ಶಂಕಿಸಬಾರದು. ಶಾಸ್ತ್ರೀಯ ವ್ಯವಹಾರದಲ್ಲಿ ಆತ್ಮನಿಗೆ ದೇಹಾತಿರಿಕ್ತವಾದ ಜ್ಞಾನದ ಅಪೇಕ್ಷೆ ಇದ್ದರೂಕೂಡ, ವೇದಾಂತ ವೇದ್ಯನೂ ಹಸಿವು ನೀರಡಿಕೆಗಳಿಂದ ಅತೀತನೂ ಬ್ರಹ್ಮ, ಕ್ಷತ್ರಿಯ ಭೇದರಹಿತನೂ, ಅಸಂಸಾರಿಯೂ ಆದ ಆತ್ಮತತ್ತ್ವವನ್ನು ತಿಳಿದವನಿಗೆ ಉಪಯೋಗವಿಲ್ಲದಿರುವುದರಿಂದ, ಅಧಿಕಾರಕ್ಕೆ ವಿರುದ್ಧವಾಗುವುದರಿಂದ, ಜ್ಞಾನದ ಅಪೇಕ್ಷೆ ಇರುವುದಿಲ್ಲ. ಆತ್ಮತತ್ತ್ವವನ್ನು ತಿಳಿಯುವ ಮೊದಲು, ಶಾಸ್ತ್ರೀಯ ವ್ಯವಹಾರದಲ್ಲಿ ತೊಡಗುವವನನ್ನು ಶಾಸ್ತ್ರವು ಅವಿದ್ಯೆಯಿಂದ ಕೂಡಿದ ವಿಷಯಗಳಲ್ಲಿಯೇ ಪ್ರವರ್ತಿಸುವಂತೆ ಮಾಡುತ್ತದೆ. ಹೇಗೆಂದರೆ 'ಬ್ರಾಹ್ಮಣೋಯಜೇತ' 'ಅಷ್ಟವರ್ಷಂ ಬ್ರಾಹ್ಮಣಂ ಉಪನಯೀತ,' 'ಕೃಷ್ಣ ಕೇಶೋಽಗ್ನಿನಾದಧೀತ' ಇತ್ಯಾದಿ ವೇದ ವಾಕ್ಯಗಳು ಬ್ರಾಹ್ಮಣಾದಿ ಪದಗಳಿಂದ ವರ್ಣಾದಿಗಳಲ್ಲಿ ಅಭಿಮಾನಿಯಾದ ಅಧಿ

ಕಾರಿಯನ್ನು ತಿಳಿಸುತ್ತಲೇ ಅಧ್ಯಾಸವನ್ನು ಉಂಟುಮಾಡುತ್ತವೆ. ಹೀಗೆ ಶಾಸ್ತ್ರೀಯ ವ್ಯವಹಾರವೂ ಕೂಡ ಅಧ್ಯಾಸ ಮೂಲಕವೇ ನಡೆಯುತ್ತದೆ.

ಅಧ್ಯಾಸ ವ್ಯವಹಾರದ ಪ್ರಾಮಾಣ್ಯದ ಉಪಸಂಹಾರ

ಶುಕ್ತಿರಜತಾದಿಗಳು ವ್ಯವಹಾರದ ಕಾಲದಲ್ಲಿಯೇ ಬಾಧಿತವಾಗುವುದರಿಂದ, ಬ್ರಹ್ಮಜ್ಞಾನವನ್ನು ಬಿಟ್ಟು ಉಳಿದ ಜ್ಞಾನಗಳು ಬಾಧಿತವಾಗುತ್ತವೆ. ವ್ಯಾವಹಾರಿಕವಾದ ಪ್ರಪಂಚವು ಬ್ರಹ್ಮನಲ್ಲಿ ಅಧ್ಯಸ್ತವಾಗಿರುವುದರಿಂದ, ಬ್ರಹ್ಮಜ್ಞಾನದಿಂದ ಮಾತ್ರ ಅದು ಬಾಧಿತವಾಗುತ್ತದೆ. ಶುಕ್ತಿ ಮತ್ತು ರಜತ, ಬ್ರಹ್ಮಜ್ಞಾನ ಪರ್ಯಂತವಾದ ಪ್ರಪಂಚ ಇವು ಅಧ್ಯಸ್ತವಾಗಿರುವುದರಲ್ಲಿ ವಿಶೇಷವಿಲ್ಲದಿದ್ದರೂ, ಇವುಗಳಲ್ಲಿ ವೈಲಕ್ಷಣ್ಯವಿದೆ. ಆದ್ದರಿಂದಲೇ ದೇಹಾತ್ಮ ಪ್ರತ್ಯಯ ಇತ್ಯಾದಿಗಳಿಂದ * ಭಾಷ್ಯದಲ್ಲಿ ದೇಹಾತ್ಮ ಪ್ರತ್ಯಯದಂತೆ ಘಟಾದಿ ಪ್ರಪಂಚ ವ್ಯವಹಾರವೂ ಕೂಡ ಆತ್ಮನ ಯಥಾರ್ಥ ಜ್ಞಾನ ಬರುವವರೆಗೆ ಪ್ರಮಾಣ ಎಂದು ಹೇಳಲ್ಪಟ್ಟಿದೆ.

ಹೀಗೆ ಅದ್ವೈತ ಸಿದ್ಧಾಂತದಲ್ಲಿ ಅಧ್ಯಾಸ, ತನ್ಮೂಲಕವಾದ ವ್ಯವಹಾರವು ಪ್ರಾಮಾಣಿಕವೇ ಆಗಿದೆ ಎಂಬುದು ಸುವಿಶ

* ದೇಹಾತ್ಮ ಪ್ರತ್ಯಯೋ ಯದ್ವತ್ಪ್ರಮಾಣತ್ವೇನ ಕಲ್ಪಿತಃ
ಲೌಕಿಕಂ ತದ್ವದೇವೇದಂ ಪ್ರಮಾಣಂತ್ವಾತ್ಮನಿಶ್ಚಯಾತ್
ಬ್ರ. ಸೂ. ಶಾಂ. ಭಾ. 1. 1. 4.

ಅದ್ವೈತಮತದಲ್ಲಿ ಅಧ್ಯಾಸ

ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಸಂಶೋಧಕರಾಗಿದ್ದು, ಹಲವಾರು ಕೃತಿಗಳನ್ನು ಸಂಪಾದಿಸಿರುವ ಖ್ಯಾತ ವಿದ್ವಾಂಸರಾದ ವಿದ್ಯಾಲಂಕಾರ ಆರ್. ರಾಮಾಶಾಸ್ತ್ರೀಗಳವರು ಸಂಸ್ಕೃತದಲ್ಲಿ ರಚಿಸಿದ ಲೇಖನದ ಅನುವಾದ ಇದು.

ಕುಮಾರಿ ಎಚ್. ಎಲ್. ಸೀತಾದೇವಿ ಮೈಸೂರು ವಿಶ್ವವಿದ್ಯಾಲಯದ ಸಂಸ್ಕೃತ ಎಂ. ಎ. ಪದವೀಧರೆಯಾಗಿದ್ದು, ಲೇಖನ ವ್ಯವಸಾಯದಲ್ಲಿ ನಿರತರಾಗಿದ್ದಾರೆ.

ಪ್ರಕಾಶಕರು